ಈ ದಿನ ದಿನಾಂಕಃ 18.10.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀಸವಾಲು ಪ್ರತಿವಾದಿ ಪರ ಶ್ರೀ ಸಿ ಎಂ ಕೆ ವಕೀಲರಿಂದಃ</u>**

ನನ್ನ ತಂದೆ ತಾಯಿಯ ಹೆಸರು ಗೌರಮ್ಮ ಹಾಗೂ ಸಿದ್ದಲಿಂಗಪ್ಪ. ನನ್ನ ತಂದೆ 2002 ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾಯಿ 2011 ರಲ್ಲಿ ಮರಣ ಹೊಂದಿರುತ್ತಾರೆ. ನಮ್ಮ ತಂದೆ ತಾಯಿಗೆ ನಾವು 8 ಜನ ಗಂಡು ಮಕ್ಕಳು, 4 ಜನ ಹೆಣ್ಣುಮಕ್ಕಳು ಅವರಲ್ಲಿ 3 ಜನ ಹೆಣ್ಣುಮಕ್ಕಳು ಮರಣ ಹೊಂದಿರುತ್ತಾರೆ. 4 ಜನ ಹೆಣ್ಣುಮಕ್ಕಳ ಪೈಕಿ ಇಬ್ಬರಿಗೆ ನನ್ನ ತಂದೆ ಮದುವೆ ಮಾಡಿದ್ದು ನನ್ನ ಒಂದು ತಂಗಿಯ ಮದುವೆಯನ್ನು ನಾನು ಮಾಡಿರುತ್ತೇನೆ. ಮತ್ತೊಂದು ಹೆಣ್ಣುಮಗಳು ಮದುವೆಯಾಗದೇ ಅನಾರೋಗ್ಯ ಕಾರಣದಿಂದ ಮರಣ ಹೊಂದಿರುತ್ತಾರೆ. 8 ಜನ ಗಂಡು ಮಕ್ಕಳ ಪೈಕಿ 6 ಜನ ಗಂಡು ಮಕ್ಕಳಿಗೆ ನಾನು ಮದುವೆ ಮಾಡಿರುತ್ತೇನೆ. ನನ್ನ ತಮ್ಮಂದಿರ ಮದುವೆ ಕಾಲಕ್ಕೆ ನನ್ನ ತಂದೆ ಜೀವಂತ ಇದ್ದರು ಎಂದರೆ ಸರಿ. ನನ್ನ ಮದುವೆಯನ್ನು ನನ್ನ ತಂದೆ ತಾಯಿ ಮಾಡಿರುತ್ತಾರೆ ಎಂದರೆ ಸರಿ.

2. ನನ್ನ ತಂದೆ ಜೀವಿತ ಕಾಲದಲ್ಲಿ ಹಾಗೂ ಆತನ ಮರಣದ ನಂತರದಲ್ಲಿ ಇಲ್ಲಿಯವರೆಗೂ ನಾನು ಹಾಗೂ ನನ್ನ ಅಣ್ಣತಮ್ಮಂದಿರು ಅಕ್ಕತಂಗಿಯರು ನೊಂದಾಯಿತ ಪಾಲು ವಿಭಾಗ ಪತ್ರ ಮಾಡಿಕೊಂಡಿಲ್ಲವೆಂದರೆ ಸರಿ. ನನಗೆ ಪೂರ್ವದಲ್ಲಿ 1ನೇ ಪ್ರತಿವಾದಿ ಹಾಲ ಸಿದ್ದಪ್ಪ ಮನೆ ಯಜಮಾನಿಕೆ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸುಮಾರು 2 ವರ್ಷ ಮಾಡಿರುತ್ತಾರೆಂದು ನುಡಿಯುತ್ತಾರೆ. ನನ್ನ ತಾಯಿ 2011 ನೇ ಮರಣ ಹೊಂದಿದ ನಂತರ ಮನೆ ಯಜಮಾನಿಕೆಯನ್ನು ನಾನು ಮಾಡುತ್ತಿದ್ದೇನೆ. 1985-1987 ರವರೆಗೆ ನನ್ನ ಅಣ್ಣ 1ನೇ ಪ್ರತಿವಾದಿ ಮನೆ ಯಜಮಾನಿಕೆಯನ್ನು ಮಾಡಿರುತ್ತಾರೆ. 1987 ರ ನಂತರ ನನ್ನ ತಂದೆ ಮನೆ ಯಜಮಾನಿಕೆಯನ್ನು 1995 ರವರೆಗೆ ಮಾಡಿರುತ್ತಾರೆ ಎಂದರೆ ಸರಿ. 1995ರ ನಂತರ ನನ್ನ ತಾಯಿ ಮನೆ ಯಜಮಾನಿಕೆಯನ್ನು ಮಾಡಿರುತ್ತಾರೆ.

3. ನನ್ನ ತಂದೆ ತಾಯಿ ಜೀವಿತ ಕಾಲದಲ್ಲಿ ಹಾಗೂ ಅವರ ಮರಣದ ನಂತರ ಒಟ್ಟು ಕುಟುಂಬದಲ್ಲಿ ಬಾಳ್ವೆ ಮಾಡುತ್ತಿದ್ದೇವೆ ಎಂದರೆ ಸರಿ. ಸರ್ವೆ ನಂ. 17/2 ರ ಆಸ್ತಿ ಶೃಂಗಾರಬಾಗ್ ಗ್ರಾಮದಲ್ಲಿದೆ ಸದರಿ ಆಸ್ತಿ ವಿಸ್ತೀರ್ಣ 5 ಎಕರೆ. ನನ್ನ ತಂದೆ ಜೀವಿತ ಕಾಲದಲ್ಲಿ ಸದರಿ ಆಸ್ತಿಯನ್ನು ನನ್ನ ತಂದೆ ಖರೀದಿಸಿರುತ್ತಾರೆ ಎಂದರೆ ಸರಿ. 1981-82 ನೇ ಸಾಲಿನಲ್ಲಿ ಸರ್ವೆ ನಂ. 17/2ರ 5 ಎಕರೆ ಜಮೀನನ್ನು ಖರೀದಿಸಿರುತ್ತೇನೆ ಆ ಕಾಲಕ್ಕೆ ನನ್ನ ತಂದೆ ಜೀವಂತ ಇದ್ದರು ಎಂದರೆ ಸರಿ. ಆಸ್ತಿ ಖರೀದಿ ಮಾಡಿದ ಕಾಲಕ್ಕೆ 1987- 1995 ರವರೆಗೆ ನನ್ನ ತಂದೆ ಮನೆ ಯಜಮಾನಿಕೆಯನ್ನು ಮಾಡುತ್ತಿದ್ದರು ಎಂದರೆ ಸರಿ. 1981-82 ನೇ ಸಾಲಿನಲ್ಲಿ ನಾನು ಮದುವೆಯಾಗಿರಲಿಲ್ಲ ಎಂದರೆ ಸರಿಯಲ್ಲ. 1995 ನೇ ಸಾಲಿನಲ್ಲಿ ನಾನು ಮದುವೆಯಾಗಿರುತ್ತೇನೆ. 1981-82 ನೇ ಸಾಲಿನಲ್ಲಿ ಆಸ್ತಿ ಖರೀದಿಸುವ ಕಾಲಕ್ಕೆ ನನ್ನ ವಯಸ್ಸು 15-16 ವರ್ಷ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 20 ವರ್ಷ ಆಗಿತ್ತೆಂದು ನುಡಿಯುತ್ತಾರೆ. ನಾನು ಮದುವೆಯಾಗುವ ಕಾಲಕ್ಕೆ ನನ್ನ ವಯಸ್ಸು 30 ವರ್ಷ ಆಗಿತ್ತು.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.